ಕರ್ನಾಟಕ ವಿಶ್ವವಿದ್ಯಾಲಯ
KARNATAK UNIVERSITY
Accredited 'A' Grade by NAAC 2022

Karnatak University, Dharwad | Azadi Ka Amrit Mahotsav | ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ನಂ. ಕವಿವಿ/ಶಿಶಿಬಗ್ರಂಥ/2023/481 ದಿನಾಂಕ: 13/10/2023

## ಸುತ್ತೋಲೆ

ಉಲ್ಲೇಖ: 1) ಕವಿಸಸ/ಗ್ರಂಶಾ/158/ಗ್ರ.ಸ.ಟಿ./2023–24 ದಿನಾಂಕ: 12–09–2023
2) ಮಾನ್ಯ ಕುಲಪತಿಗಳ ಆದೇಶ ದಿನಾಂಕ 12-10-2023

ಕರ್ನಾಟಕ ರಾಜ್ಯ ವಿಧಾನ ಮಂಡಲ ಗ್ರಂಥಾಲಯದಲ್ಲಿ ಅನೇಕ ಉಪಯುಕ್ತ ಗ್ರಂಥಗಳು ಪರಾಮರ್ಶೆಗಾಗಿ ಲಭ್ಯವಿರುತ್ತವೆ. ಗ್ರಂಥಾಲಯವು 1930 ರಲ್ಲಿ ಸ್ಥಾಪನೆಯಾಗಿದ್ದು ಅತ್ಯಮೂಲ್ಯ ಅಂದರೆ, ಭಾರತ ಸಂವಿಧಾನ ರಚನಾ ಸಭೆಯ ನಡಾವಳಿಗಳು, ಕರ್ನಾಟಕ ವಿಧಾನ ಮಂಡಲ, ಲೋಕಸಭೆ, ಮತ್ತು ರಾಜ್ಯ ಸಭೆ ನಡಾವಳಿಗಳು, ಜನಗಣತಿಯ ವರದಿಗಳು, ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಗೆಜೆಟ್‌ಗಳು, ಸಮೀತಿಗಳು ಹಾಗೂ ಆಯೋಗಗಳ ವರದಿಗಳು, ಭಾರತದ ಮಹಾಪುರುಷರ ಚರಿತ್ರೆಗಳು ಇನ್ನೂ ಹಲವಾರು ಸಂಗ್ರಹಗಳನ್ನು ಹೊಂದಿದೆ. ಇದಲ್ಲದೆ ವಿಧಾನ ಮಂಡಲದ ಉಭಯ ಸಧನಗಳ ನಡಾವಳಿ ಪುಸ್ತಕಗಳು ಡಿಜಿಟಲ್ ರೂಪದಲ್ಲಿ www.kla.kar.nic.in ನಲ್ಲಿ ಲಭ್ಯವಿರುತ್ತವೆ. ಸದರಿ link ಪ್ರೊ. ಶಿ. ಶಿ. ಬಸವನಾಳ ಗ್ರಂಥಾಲಯದ website ನಲ್ಲಿ ಲಭ್ಯವಿರುತ್ತದೆ. ಮುದ್ರಿತ ಗ್ರಂಥಗಳನ್ನು (hard copy) ವಿಧಾನ ಮಂಡಲ ಗ್ರಂಥಾಲಯ, ಕೊಠಡಿ ಸಂಖ್ಯೆ 28, ನೆಲಮಹಡಿ ವಿಧಾನ ಸೌಧ, ಬೆಂಗಳೂರು. ಇಲ್ಲಿ ಪರಾಮರ್ಶಿಸಲು ಲಭ್ಯವಿರುತ್ತವೆ.

ಆದ್ದರಿಂದ ಕರ್ನಾಟಕ ವಿಶ್ವವಿದ್ಯಾಲಯದ ಎಲ್ಲ ಸಂಶೋಧನಾ ವಿದ್ಯಾರ್ಥಿಗಳು ಮತ್ತು ಪ್ರಾಧ್ಯಾಪಕರು ಇದರ ಉಪಯೋಗವನ್ನು ಪಡೆದುಕೊಳ್ಳಲು ಸೂಚಿಸಿದೆ.

ಕುಲಸಚಿವರು 13/10/23